ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ ವಾರ್ಡ್ ಸಮಿತಿ/ ಸಹಾಯಕ ಅಭಿಯಂತರರವರ ಕಛೇರಿ, ವಾರ್ಡ್ ಸಂಖ್ಯೆ 146 ಲಕ್ಕಸಂದ್ರ 16ನೇ ಅಡ್ಡರಸ್ತೆ, ಲಕ್ಕಸಂದ್ರ, ಬೆಂಗಳೂರು –560030

ದಿನಾಂಕ: 02/12/2020

## ಸಭೆ ತಿಳುವಳಿಕೆ ಪತ್ರ

ವಿಷಯ:– ವಾರ್ಡ್ ಸಮಿತಿ ಸಭೆಯನ್ನು ನಡೆಸುವ ಬಗ್ಗೆ

ಉಲ್ಲೇಖ:1) ಘನ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂಪಿ 24739/2012, ದಿನಾಂಕ: 10.11.2017

2) ಕೇಂದ್ರ ಕಛೇರಿ ಆದೇಶ ಸಂಖ್ಯೆ: ಬಿ12(5)/ಪಿಆರ್/35/2020–21, ದಿನಾಂಕ: 02.11.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳಂತೆ ಪ್ರತಿ ಮಾಹೆಯ 1ನೇ ಮತ್ತು 3ನೇ ಶನಿವಾರ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಬೇಕಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣವಲಯದ ವಾರ್ಡ್ ಸಂಖ್ಯೆ 146 ಲಕ್ಕಸಂದ್ರ 16ನೇ ಅಡ್ಡರಸ್ತೆ, ಸಹಾಯಕ ಅಭಿಯಂತರರ ಕಛೇರಿ(ಗ್ರಂಥಾಲಯ ಕಟ್ಟಡ),ಲಕ್ಕಸಂದ್ರ, ಬೆಂಗಳೂರು –560030 ಇಲ್ಲಿ ಸಭೆಯನ್ನು ದಿನಾಂಕ: 05.12.2020ರ ಬೆಳಿಗ್ಗೆ 09:00 ಗಂಟೆಗೆ ನಿಗಧಿಪಡಿಸಲಾಗಿದ್ದು, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸದಸ್ಯರುಗಳು ವಾಡ್ ಸಂಖ್ಯೆ 146 ಲಕ್ಕಸಂದ್ರಕ್ಕೆ ಸಂಬಂಧಿಸಿದ ಅಧಿಕಾರಿಗಳು/ ನೌಕರರು ಸಭೆಗೆ ತಪ್ಪದೇ ಹಾಜರಾಗಲು ಈ ಮೂಲಕ ಕೋರುತ್ತೇನೆ.

**:ಸಭಾ ಅಜೆಂಡಾ:**

| | |
|---|---|
| 1) | ಹಿಂದಿನ ಸಭೆಯ ನಡುವಳಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2) | ವಾರ್ಡ್ ಸಮಿತಿಯನ್ನು ರಚಿಸುವ ಬಗ್ಗೆ |
| 3) | ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ |
| 4) | ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ |
| 5) | ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳ ಬಗ್ಗೆ ಚರ್ಚೆ |

(ಸಹಿ) 2/12/2020
ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:146, ಲಕ್ಕಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ :–

1) ಶ್ರೀ. ಡಾ॥ ಲಕ್ಷ್ಮೀನಾರಾಯಣ ಸ್ವಾಮಿ ಸಹಾಯಕ ನಿರ್ದೇಶಕರು(ಪಶುಪಾಲನೆ ಫ್ರೇಜರ್‌ಟೌನ್ ಕಸಾಯಿ ಖಾನೆ) ಬಿಬಿಎಂಪಿ / ನೋಡಲ್ ಅಧಿಕಾರಿ ಮಾನ್ಯ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು(ಘ.ತ್ಯಾ.ನಿ.ಅ.ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ ವಿಭಾಗ ಎಸ್–14 ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು ಉಪ ವಿಭಾಗ ಬೆಂಗಳೂರು ನೀರುಸರಬರಾಜು ಮಂಡಳಿ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
6) ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
7) ಆರೋಗ್ಯ ವೈದ್ಯಾಧಿಕಾರಿಗಳು ಬಿ.ಟಿ.ಎಂ ಲೇಔಟ್ ವಿಭಾಗದವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಕಂದಾಯ ಅಧಿಕಾರಿಗಳು ಬಿ.ಟಿ.ಎಂ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಉಪವಿಭಾಗ ದಕ್ಷಿಣ ವಲಯ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
10) ಆರಕ್ಷಕ ಉಪನಿರೀಕ್ಷಕರು ಆಡುಗೋಡಿ ಪೊಲೀಸ್ ಠಾಣೆ ಮತ್ತು ಸಂಚಾರಿ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–146 ಲಕ್ಕಸಂದ್ರ ಕಛೇರಿಯಲ್ಲಿ ದಿನಾಂಕ: 05.12.2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಬಿ.ಎಂ.,ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿಆರ್/35/2020–21/02–11–2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ.ಡಾ|| ಲಕ್ಷ್ಮಿನಾರಾಯಣ ಸ್ವಾಮಿ ಸಹಾಯಕ ನಿರ್ದೇಶಕರು, (ಪಶುಪಾಲನೆ ಫ್ರೇಜರ್‌ಟೌನ್ ಕಸಾಯಿಖಾನೆ ಬಿ.ಬಿ.ಎಂ.ಪಿ.)ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ/ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ**

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಡಾ|| ಲಕ್ಷ್ಮಿನಾರಾಯಣ ಸ್ವಾಮಿ ಸಹಾಯಕ ನಿರ್ದೇಶಕರು, (ಪಶುಪಾಲನೆ ಫ್ರೇಜರ್‌ಟೌನ್ ಕಸಾಯಿಖಾನೆ) ಬಿ.ಬಿ.ಎಂ.ಪಿ. | 9480685653 |
| 2 | ಶ್ರೀ.ನರೇಶ್‌ಕುಮಾರ್.ಕೆ ಸ.ಇಂ– ವಾರ್ಡ್ 146(ಪ್ರಭಾರ) | 9844407499 |
| 3 | ಶ್ರೀ.ಸಂದೀಪ್ ಕೆಲಸ ಪರಿವೀಕ್ಷಕರು ಬಿ.ಬಿ.ಎಂ.ಪಿ | 9513342625 |
| 4 | ಶ್ರೀಮತಿ.ರೂಪ ಹಿರಿಯ ಆರೋಗ್ಯ ಪರಿವೀಕ್ಷಕರು | 9900858279 |
| 5 | ಶ್ರೀ. ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು | 9738721476 |
| 6 | ಶ್ರೀ.ನಜರುಲ್ಲಾ ಗ್ಯಾಂಗ್‌ಮೆನ್ | 8867594491 |
| 7 | ಶ್ರೀ ಗೋಪಿನಾಥ್.ಎಸ್ BWSSB Meter reader | 8660155806 |
| 8 | ಶ್ರೀ.ಮುಹಿಬುಲ್ಲಾ. ಹೆಚ್.ಎಂ ಮೌಲ್ಯಮಾಪಕರು | 9886306562 |
| 9 | ಶ್ರೀ. ಜಾದವ್ ಪ್ರಕಾಶ್ ಸ.ಅ | 7498626883 |
| 10 | ಶ್ರೀ. ಅನಂತ್ ರಾಜು ಸ.ಕಾ.ಅ RI BBMP | 9448543601 |
| 11 | ಶ್ರೀ.ಹೇಮಂತ್ ಕುಮಾರ್ ಮಾರ್ಷಲ್ | 9900845779 |
| 12 | ಶ್ರೀ. ಚಂದ್ರಶೇಖರ್ DWCC | 9535484078 |
| 13 | ಶ್ರೀ. ಇರ್ಷಾದ್ ಖಾನ್ ಕಂದಾಯ ಇಲಾಖೆ | 9206118409 |
| 14 | ಶ್ರೀ ಸತೀಶ್ ASI Adugodi Traffic Police Station | 8317369159 |
| 15. | ಶ್ರೀ.ಅರುಣ್ ಪ್ರಸಾದ್ | 9341322130 |

* * * * * *

ದಿನಾಂಕ–05–12–2020ರಂದು ಬೆಳಿಗ್ಗೆ 9.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.



Scanned with CamScanner

1. **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ಸತೀಶ್ ASI Adugodi Traffic Police Station ರವರು ಮಾತನಾಡಿ ಬನ್ನೇರುಘಟ್ಟ ಮುಖ್ಯರಸ್ತೆಯ ಮೈಕೋ ಸಿಗ್ನಲ್ ಕಡೆಯಲ್ಲಿ ಸರಿಯಾಗಿ ಕಸ ಗುಡಿಸುತ್ತಿರುವುದಿಲ್ಲ ಹಾಗೂ ಕರ್ಬ್ ಪಕ್ಕದಲ್ಲಿ ಬಿದ್ದಿರುವ ಮಣ್ಣನ್ನು ಸಹ ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿದಿರು ಮತ್ತು ಚಂದ್ರಪ್ಪ ನಗರದ ಅಕ್ಕಪಕ್ಕದಲ್ಲಿ ಘನತ್ಯಾಜ್ಯ ನಿರ್ವಹಣೆಯ ಆಟೋ ಟಿಪ್ಪರ್‌ಗಳನ್ನು ರಸ್ತೆ ಮತ್ತು ಪಾದಚಾರಿ ಮಾರ್ಗಗಳಲ್ಲಿ ನಿಲ್ಲಿಸುತ್ತಿದ್ದು ಇದರಿಂದ ಬ್ಲಾಕ್‌ಸ್ಪಾಟ್ ನಿರ್ಮಾಣವಾಗುತ್ತಿದೆ ಎಂದು ತಿಳಿಸಿದರು ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ಸದರಿ ದೂರಿನ ಬಗ್ಗೆ ಕೂಡಲೇ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು ಮತ್ತು ರಸ್ತೆಯಲ್ಲಿ ನಿಲ್ಲಿಸಿರುವ ಆಟೋ ಟಿಪ್ಪರ್‌ಗಳು ಈ ವಾರ್ಡ್‌ಗೆ ಸಂಭಂದಿಸಿಲ್ಲವಾಗಿದ್ದು ಅವುಗಳ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ಕೋರಿದರು.

ಮುಂದುವರೆದಂತೆ ಸಭೆಗೆ ಹಾಜರಿದ್ದ, ಶ್ರೀ. ಚಂದ್ರಶೇಖರ್ DWCC ರವರು ಮಾತನಾಡಿ ಸದ್ಯದಲ್ಲೇ ಒಣತ್ಯಾಜ್ಯ ಸಂಗ್ರಹಿಸುತ್ತಿರುವ & ಕಸ ನೀಡುವ ಸಮಯದಲ್ಲಿ ಸಾರ್ವಜನಿಕರು ಕಡ್ಡಯವಾಗಿ ಮಾಸ್ಕ್ ಧರಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಭೆಗೆ ತಿಳಿಸಿದರು.

**ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ** 146 ರವರು ಮಾತನಾಡಿ ಸಮರ್ಪಕವಾಗಿ ಮುಖ್ಯರಸ್ತೆಗಳಲ್ಲಿ ಸರಿಯಾಗಿ ಕಸ ಗುಡಿಸುತ್ತಿರುವುದಿಲ್ಲ ಹಾಗೂ ಕರ್ಬ್ ಪಕ್ಕದಲ್ಲಿ ಬಿದ್ದಿರುವ ಮಣ್ಣನ್ನು ಸಹ ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿದಿರು, ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸದರಿ ದೂರಿನ ಬಗ್ಗೆ ಕೂಡಲೇ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು

2. **ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ಸತೀಶ್ ASI Adugodi Traffic Police Station ರವರು ಮಾತನಾಡಿ ಬನ್ನೇರುಘಟ್ಟ ಮುಖ್ಯರಸ್ತೆಯ ಮೈಕೋ ಸಿಗ್ನಲ್ ಕಡೆಯಲ್ಲಿ ಯಾವುದೇ ಬೀದಿಬದಿ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ ಇದರಿಂದ ಅಪಘಾತಗಳಾಗುವ ಸಾಧ್ಯತೆಗಳು ಹೆಚ್ಚಾಗಿದ್ದು ಕೂಡಲೇ ಸಂಬಂಧಿಸಿದ ಇಲಾಖೆಯವರು ಕ್ರಮವಹಿಸಲು ಕೋರಿದರು.

ಈ ಬಗ್ಗೆ **ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ** 146 ರವರು ಸಂಬಂಧಿಸಿದ ಅಭಿಯಂತರರೊಂದಿಗೆ ದೂರವಾಣಿ ಮುಖೇನ ಮಾತನಾಡಿ ಕೂಡಲೇ ಕ್ರಮವಹಿಸುವಂತೆ ಕೋರಿದರು.

**ಮಾನ್ಯ ಅಧ್ಯಕ್ಷರು** ರವರು ಮಾತನಾಡಿ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಸಂಬಂಧಿಸಿದ ಅಭಿಯಂತರರು ಮತ್ತು ನಿರ್ವಹಣೆದಾರರು ಸಭೆಗೆ ಹಾಜರಾಗುವಂತೆ ತಿಳಿಸಲು ಹಾಜರಿದ್ದ ಕಾರ್ಯದರ್ಶಿರವರಿಗೆ ತಿಳಿಸಿದರು.

3. **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಬಗ್ಗೆ.**

**ಸಹಾಯಕ ಅಭಿಯಂತರರು** ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಶ್ರೀ ಗೋಪಿನಾಥ್ BWSSB Meter reader ರವರೊಂದಿಗೆ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಅಥವಾ ಪಾದಚಾರಿ ಮಾರ್ಗವನ್ನು ಅಗೆಯುವ ಮುನ್ನ ಬಿ.ಬಿ.ಎಂ.ಪಿ ವತಿಯಿಂದ ಅನುಮತಿ ಪಡೆದು ರಸ್ತೆ ಅಗೆಯುವಂತೆ ತಿಳಿಸಿದರು ಹಾಗೂ ತಮ್ಮ ಇಲಾಖೆವತಿಯಿಂದ ಕೈಗೊಂಡ ಕಾಮಗಾರಿಯ ಅನುಪಯುಕ್ತ ಮಣ್ಣನ್ನು ತೆರವುಗೊಳಿಸಲು ತಿಳಿಸಿದರು.

4. **ಕಂದಾಯ ಇಲಾಖೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ.ಮುಹಿಬುಲ್ಲಾ. ಹೆಚ್.ಎಂ ಮೌಲ್ಯಮಾಪಕರು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 4100 ಆಸ್ತಿಗಳಿದ್ದು ಪ್ರತಿ ವರ್ಷ ಸುಮಾರು ರೂ. 17.36 ಕೋಟಿಗಳಷ್ಟು ತೆರಿಗೆಯು ಪಾವತಿಯಾಗಬೇಕಿದ್ದು ಈ ವರ್ಷವು ಸುಮಾರು 3300 ಆಸ್ತಿಗಳ ರೂ. 11 ಕೋಟಿಗಳಷ್ಟು ತೆರಿಗೆಯು ಪಾವತಿಯಾಗಿರುತ್ತದೆಂದು ಸಭೆಗೆ ತಿಳಿಸಿದರು.

**ಈ ಬಗ್ಗೆ ಮಾನ್ಯ ಅಧ್ಯಕ್ಷರು** ರವರು ಮಾತನಾಡಿ ಪಾವತಿ ಮಾಡಿಲ್ಲದಿರುವಂತಹ ಮಾಲೀಕರಿಗೆ ನೋಟಿಸ್ ಜಾರಿಮಾಡಿ ಕ್ರಮವಹಿಸುವಂತೆ ಸೂಚಿಸಿದರು.

5. **ಆರೋಗ್ಯ ಇಲಾಖೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀಮತಿ.ರೂಪ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ 2 ತಂಡಗಳಂತೆ ಕೋವಿಡ್-19 ರ ಬಗ್ಗೆ ತಪಾಸಣೆ ಕೇಂದ್ರಗಳನ್ನು ತೆರೆದಿದ್ದು ಪ್ರತಿನಿತ್ಯ 80-90 ಜನ ಕೋವಿಡ್ ಪರಿಕ್ಷೆಯನ್ನು ಪಡೆಯುತ್ತಿರುತ್ತಾರೆಂದು ಸಭೆಗೆ ತಿಳಿಸಿದರು, ಹಾಗೂ ಕೋವ್ಯಾಕ್ಸಿನ್‌ಗೆ ಸಂಬಂಧಿಸಿದಂತೆ ಎಲ್ಲಾ ತಯಾರಿಗಳನ್ನು ಸಿದ್ದಪಡಿಸಲಾಗುತ್ತಿದೆಂದು ತಿಳಿಸಿದರು.



Scanned with CamScanner

6. **ಕಾಮಗಾರಿ ಇಲಾಖೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ಸತೀಶ್ ASI Adugodi Traffic Police Station ರವರು ಮಾತನಾಡಿ ಬನ್ನೇರುಘಟ್ಟ ಮುಖ್ಯರಸ್ತೆಯ ಮೈಕೋ ಸಿಗ್ನಲ್ ಕಡೆಯಲ್ಲಿ ತುರ್ತಾಗಿ ಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕೋರಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ. ಅನಂತ್ ರಾಜು ಸ.ಕಾ.ಅ RI BBMP ರವರು ಮಾತನಾಡಿ ಕೂಡಲೇ ಸೂಕ್ತ ಕ್ರಮವಹಿಸುವುದಾಗಿ ತಿಳಿಸಿದರು.

7. **BBMP My City My Budget 2021-22**

ಸಭೆಗೆ ಹಾಜರಿದ್ದ ಶ್ರೀ ಶ್ರೀ.ಅರುಣ್ ಪ್ರಸಾದ್ ರವರು ಮಾತನಾಡಿ ಮೈಕೋ ರಸ್ತೆಯಲ್ಲಿರುವ ಸಾರ್ವಜನಿಕ ಶೌಚಲಯ ರವರು ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡುತ್ತಿಲ್ಲವೆಂದು ತಿಳಿಸಿದರು, ಈ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡಿ ಸದರಿ ಶೌಚಲಯವನ್ನು ಸುಲಭ್ ಶೌಚಲಯ ರವರು ನಿರ್ವಹಣೆ ಮಾಡುತ್ತಿದ್ದು ಸಂಬಂಧಿಸಿದವರಿಗೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು,ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಮುಖ್ಯರಸ್ತೆಗಳಲ್ಲಿ ಈಗಾಗಲೇ ಶೌಚಲಯಗಳನ್ನು ನಿರ್ಮಿಸಲಾಗಿದ್ದು ಸಮರ್ಪಕವಾಗಿ ನಿರ್ವಹಣೆಯನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಭೆಗೆ ಹಾಜರಿದ್ದ ಶ್ರೀ ಶ್ರೀ.ಅರುಣ್ ಪ್ರಸಾದ್ ರವರು ಮಾತನಾಡಿ ಮುಖ್ಯರಸ್ತೆಗಳಲ್ಲಿ ಹಾಕುವ ಡಿವೈಡರ್‌ಗಳ ತಳಬಾಗದಲ್ಲಿ ಮಳೆನೀರು ಹರಿಯಲು ಸೂಕ್ತ ರಂಧ್ರಗಳನ್ನು ಮಾಡಲು ಸಲಹೆ ನೀಡಿದರು ಮತ್ತು ವೈಟ್ ಟಾಪ್ಪಿಂಗ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಗಿಡಗಳನ್ನು ನೆಡಲು ಸೂಕ್ತ ವ್ಯವಸ್ಥೆಯನ್ನು ಮಾಡುವಂತೆ ಸಲಹೆ ನೀಡಿದರು.

**ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

5/12/2020

ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:146, ಬಿ.ಟಿ.ಎಂ ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ

Scanned with CamScanner